(30)

## ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಸಿ.ಎನ್ ಮಂಜೇಗೌಡ. ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 330ರಡಿ ಮಂಡಿಸಿರುವ ಸೂಚನೆ ಸಂಖ್ಯೆ30ಕ್ಕೆ ಉತ್ತರಿಸುವ ಕುರಿತು.**

* * * * *

**ಪ್ರಶ್ನೆ:**

ಮೈಸೂರು ಜಿಲ್ಲೆಯಲ್ಲಿ ಬಿದ್ದಂಥ ಮಳೆಗೆ ಬಹುತೇಕ ಕೆರೆ ಕಟ್ಟೆಗಳು ಭರ್ತಿಯಾಗದೆ ಇರುವುದರಿಂದ ಕೆರೆ ಕಟ್ಟೆಗಳನ್ನು ತುಂಬಿಸಬೇಕೆನ್ನುವ ಕುರಿತು ನಿಯಮ 330ರ ಅಡಿ ಮಾನ್ಯ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

ಮೈಸೂರು ಜಿಲ್ಲೆಯಲ್ಲಿ ಒಟ್ಟು 2991 ಕೆರೆಗಳು ಇದ್ದು ಇವುಗಳ ಪೈಕಿ 50 ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ. 2194 ಕೆರೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸುಪರ್ದಿಯಲ್ಲಿರುತ್ತವೆ, 178 ಕೆರೆಗಳು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಒಳಪಡುತ್ತವೆ, 2 ಕೆರೆಗಳು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುತ್ತವೆ, 20 ಕೆರೆಗಳು ವಿವಿಧ ಅಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿರುತ್ತವೆ, 5 ಕೆರೆಗಳು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿರುತ್ತವೆ ಹಾಗೂ 542 ಕೆರೆಗಳು ಸ್ಥಳೀಯ ಸಂಸ್ಥೆಗಳ ಸುಪರ್ದಿಯಲ್ಲಿರುತ್ತವೆ.

ಸಣ್ಣ ನೀರಾವರಿ ಇಲಾಖೆಯ ಮೈಸೂರು ವಿಭಾಗ ವ್ಯಾಪ್ತಿಯಲ್ಲಿ 06 ಏತ ನೀರಾವರಿ ಯೋಜನೆಗಳು ಪೂರ್ಣಗೊಂಡಿದ್ದು ಚಾಲನೆಯಲ್ಲಿರುತ್ತವೆ, 05 ಪ್ರಮುಖ ಏತ ನೀರಾವರಿ ಯೋಜನೆಗಳನ್ನು ನಿರ್ಮಿಸಲಾಗುತ್ತಿದ್ದು ಪ್ರಸ್ತುತ ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ ಹಾಗೂ 02 ಏತ ನೀರಾವರಿ ಯೋಜನೆಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ. ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ಏತ ನೀರಾವರಿ ಯೋಜನೆಯ ಹೆಸರು | ನೀರು ತುಂಬಿಸಲು ಯೋಜಿಸಲಾಗಿರುವ ಕೆರೆಗಳ ಸಂಖ್ಯೆ | ಪ್ರಸ್ತುತ ನೀರು ತುಂಬಿಸುತ್ತಿರುವ ಕೆರೆಗಳ ಸಂಖ್ಯೆ | ತುಂಬಿಸಲು ಬಾಕಿ ಇರುವ ಕೆರೆಗಳ ಸಂಖ್ಯೆ |
|---|---|---|---|---|
| **ಪೂರ್ಣಗೊಂಡಿರುವ ಏತ ನೀರಾವರಿ ಯೋಜನೆಗಳು** | | | | |
| 1 | ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಲಕ್ಷ್ಮಣ ತೀರ್ಥ ನದಿಯಿಂದ ಜಿನ್ನಳ್ಳಿ ಕೆರೆ ಬಿಳಿಕೆರ ಕೆರೆ, ಹಳೆಬೀಡು ಕೆರೆಗಳಿಗೆ ಏತ ನೀರಾವರಿ ಯೋಜನೆಯ ಮೂಲಕ ನೀರೊದಗಿಸುವ ಕಾಮಗಾರಿ | 3 ಕೆರೆಗಳು | 3 ಕೆರೆಗಳು | - |
| 3 | ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಲಕ್ಷ್ಮಣ ತೀರ್ಥ ನದಿಯಿಂದ ಚೋಳೆನಹಳ್ಳಿ ಕೆರೆ ಮತ್ತು ಮೈದನಹಳ್ಳಿ ಕೆರೆಗಳಿಗೆ ಅಂತರ್ಜಲ ಮತ್ತು ಕುಡಿಯವ ನೀರಿಗಾಗಿ ಏತ ನೀರಾವರಿ ಯೋಜನೆ ಕಾಮಗಾರಿ | 7 ಕೆರೆಗಳು | 7 ಕೆರೆಗಳು | |
| 4 | ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಲಕ್ಷ್ಮಣ ತೀರ್ಥ ನದಿಯಿಂದ ಏತ ನೀರಾವರಿ ಯೋಜನೆಯ ಮೂಲಕ ಕೊಳಗಟ್ಟ ಬಳಿ ಏತ ನೀರಾವರಿ ಯೋಜನೆ ಮೂಲಕ ನೀರು ಒದಗಿಸುವುದು. | 6 ಕೆರೆಗಳು | 6 ಕೆರೆಗಳು | |
| 5 | ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು, ದೊಡ್ಡಹೊಸೂರು | 2 ಕೆರೆಗಳು | 2 ಕೆರೆಗಳು | |

| | | | | |
|---|---|---|---|---|
| | ದೊಡ್ಡಕೆರೆಗೆ ಕಾವೇರಿ ನದಿಯಿಂದ ಏತ ನೀರಾವರಿ ಮೂಲಕ ನೀರು ತುಂಬಿಸುವ ಕಾಮಗಾರಿ | | | |
| 6 | ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಇಲವಾಲ ಹೋಬಳಿಯ ಬತ್ತಿ ಹೋಗಿರುವ ಕೆರೆಗಳಿಗೆ ನೀರುಣಿಸಲು ಆನಂದೂರು ಕೊಪ್ಪಲು ಬಳಿ ಏತ ನೀರಾವರಿ ಯೋಜನೆ | 24 ಕೆರೆಗಳು | 24 ಕೆರೆಗಳು | - |
| | **ಒಟ್ಟು** | **42 ಕೆರೆಗಳು** | **42 ಕೆರೆಗಳು** | |
| | **ಪ್ರಗತಿಯಲ್ಲಿರುವ 5 ಪ್ರಮುಖ ಏತ ನೀರಾವರಿ ಯೋಜನೆಗಳು** | | | |
| 1 | ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ ಈರಪ್ಪನಕೊಪ್ಪಲು, ನಾಗವಾಲ, ಬೊಮ್ಮೆನಹಳ್ಳಿ, ಹುಯಿಲಾಳು, ಮರಟಿಕ್ಯಾತನಹಳ್ಳಿ, ದಾಸನಕೊಪ್ಪಲು ಮತ್ತು ಲಿಂಗಾಂಬುದಿ ಕೆರೆಗಳಿಗೆ ನೀರು ತುಂಬಿಸಲು ಆನಂದೂರು ಗ್ರಾಮದ ಬಳಿ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿ | 16 ಕೆರೆಗಳು | 13 ಕೆರೆಗಳು | 3 ಕೆರೆಗಳು ನಗರ ಪ್ರದೇಶದಲ್ಲಿರುವುದರಿಂದ ತಾತ್ಕಾಲಿಕವಾಗಿ ಕೈಬಿಡಲಾಗಿದೆ |
| 2 | ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ ಗುಂಗ್ರಾಲ್ ಛತ್ರ ಮತ್ತು ದೊಡ್ಡೇಗೌಡನಕೊಪ್ಪಲು (ಛತ್ರದ ಕೊಪ್ಪಲು) ಗ್ರಾಮದ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ಹಾಗೂ ಕೆರಗಳಿಗೆ ನೀರು ತುಂಬಿಸಲು ಎಡಹಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿ | 5 ಕೆರೆಗಳು | 3 ಕೆರೆಗಳು | 2 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿದೆ |
| 3 | ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಮೈದನಹಳ್ಳಿ, ಮೇಗಳಪುರ, ಇಲವಾಲ, ಗುಂಗ್ರಾಲ್ ಛತ್ರ, ಯಲಚನಹಳ್ಳಿ ಮತ್ತು ಚಿಕ್ಕನಹಳ್ಳಿ ಕೆರಗಳಿಗೆ ನೀರು ತುಂಬಿಸಲು ಆನಂದೂರು ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿ | 7 ಕೆರೆಗಳು | 4 ಕೆರೆಗಳು | 3 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿದೆ |
| 4 | ಮೈಸೂರು ಜಿಲ್ಲೆ, ಕೆ.ಆರ್. ನಗರ ತಾಲ್ಲೂಕು, ಜಪದಕಟ್ಟೆ ಏತ ನೀರಾವರಿ ಯೋಜನೆ ಕಾಮಗಾರಿ | 93 ಕೆರೆಗಳು | - | 93ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿದೆ |
| 5 | ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಲಕ್ಷ್ಮಣ ತೀರ್ಥ ನದಿಯಿಂದ ಏತ ನೀರಾವರಿ ಯೋಜನೆಯ ಮೂಲಕ ಚಲ್ಕುಂದ ಮತ್ತು ಇತರೆ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ 14 ಕೆರೆಗಳಿಗೆ ನೀರುತುಂಬಿಸುವ ಯೋಜನೆ ಕಾಮಗಾರಿ | 14 ಕೆರೆಗಳು | 14 ಕೆರೆಗಳು | - |
| | **ಒಟ್ಟು** | **135 ಕೆರೆಗಳು** | **34 ಕೆರೆಗಳು** | |

| | | | | |
|---|---|---|---|---|
| **ಅಯವ್ಯಯದಲ್ಲಿ ಘೋಷಿಸಲ್ಪಟ್ಟಿರು ಏತ ನೀರಾವರಿ ಯೋಜನೆಗಳು** | | | | |
| 1 | ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕು ಕೆಸ್ತೂರು ಕೊಪ್ಪಲು ಏತ ನೀರಾವರಿ ಯೋಜನೆ ಕಾಮಗಾರಿ | 29 ಕೆರೆಗಳು | - | 29 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದೆ |
| 2 | ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು, ದೇವನೂರು ಗ್ರಾಮದ ಬಳಿ ಏತ ನೀರಾವರಿ ಯೋಜನೆ ಕಾಮಗಾರಿ | 17 ಕೆರೆಗಳು | - | 17 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿದೆ |
| | **ಒಟ್ಟು** | **46 ಕೆರೆಗಳು** | | |
| | **ಒಟ್ಟಾರೆ ಕೆರೆಗಳ ಸಂಖ್ಯೆ** | **223 ಕೆರೆಗಳು** | **76 ಕೆರೆಗಳು** | |

ಮೈಸೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿನ ಏತ ನೀರಾವರಿ ಯೋಜನೆಗಳ ಮೂಲಕ ಒಟ್ಟು 223 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿರುತ್ತದೆ. ಈ ಕೆರೆಗಳ ಪೈಕಿ ಈಗಾಗಲೇ 76 ಕೆರೆಗಳನ್ನು ತುಂಬಿಸಲಾಗುತ್ತಿದ್ದು, ಉಳಿದ 147 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಈ ಪೈಕಿ ಸಣ್ಣ ನೀರಾವರಿ ಇಲಾಖೆಯ 4 ಕೆರೆಗಳು ಬಿಳಿಕೆರೆ, ಹಳೆಬೀಡು ಕೆರೆ ಗಳನ್ನು ಬಿಳಿಕೆರೆ ಏತ ನೀರಾವರ ಯೋಜನೆಯಡಿ ಹಾಗೂ ನೊದೆಹಳ್ಳ , ಹುಣಸೆಕಟ್ಟೆ ಕೆರೆಯನ್ನು ಎಡಹಳ್ಳಿ ಏತ ನೀರಾವರಿ ಯೋಜನೆಯಲ್ಲಿ ತುಂಬಲಾಗುತ್ತಿದೆ. ಪ್ರಸ್ತುತ ಕೆರೆಗಳಲ್ಲಿನ ಕಳೆದ 3 ತಿಂಗಳ ನೀರಿನ ಮಟ್ಟದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: MID/13/LCQ/2025

(ಎನ್.ಎಸ್ ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು

# ಅನುಬಂಧ

## ಮೈಸೂರು ಜಿಲ್ಲೆ, ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳಲ್ಲಿ ಡಿಸೆಂಬರ್ 2024, ಜನವರಿ 2025 ಮತ್ತು ಫೆಬ್ರವರಿ-2025ರ ಅಂತ್ಯಕ್ಕೆ ಸಂಗ್ರಹವಾಗಿರುವ ನೀರಿನ ವಿವರ

| ್ರಮ ಂಖ್ಯೆ | ತಿಂಗಳು | ಒಟ್ಟು ಕೆರೆಗಳ ಸಂಖ್ಯೆ | ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ (ಎಂ.ಸಿ.ಎಫ್.ಟಿ) | ಒಟ್ಟು ಅಚ್ಚುಕಟ್ಟು ಪ್ರದೇಶ (ಹೆ.) | ತುಂಬದೇ ಖಾಲಿ ಇರುವ ಕೆರೆಗಳ ಸಂಖ್ಯೆ | 1% ರಿಂದ 30% ತುಂಬಿದ ಕೆರೆಗಳ ಸಂಖ್ಯೆ | ಸಂಗ್ರಹವಾದ ನೀರಿನ ಪ್ರಮಾಣTMC ಗಳಲ್ಲಿ | 31%-50% ತುಂಬಿದ ಕೆರೆಗಳ ಸಂಖ್ಯೆ | ಸಂಗ್ರಹವಾದ ನೀರಿನ ಪ್ರಮಾಣ TMC ಗಳಲ್ಲಿ | 51%-99% ತುಂಬಿದ ಕೆರೆಗಳ ಸಂಖ್ಯೆ | ಸಂಗ್ರಹವಾದ ನೀರಿನ ಪ್ರಮಾಣ TMC ಗಳಲ್ಲಿ | ಪೂರ್ಣ ತುಂಬಿದ ಕೆರೆಗಳ ಸಂಖ್ಯೆ | ಸಂಗ್ರಹವಾದ ನೀರಿನ ಪ್ರಮಾಣ TMC ಗಳಲ್ಲಿ | ಷರಾ |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 3 | 12 | 13 | 14 | 15 |
| 1 | ಡಿಸೆಂಬರ್-2024 | 50 | 1069.77 | 6780.54 | 0 | 5 | 0.1560 | 5 | 0.028 | 39 | 0.671 | 1 | 0.065 | |
| 2 | ಜನವರಿ-2025 | 50 | 1069.77 | 6780.54 | 0 | 5 | 0.1560 | 15 | 0.096 | 29 | 0.510 | 1 | 0.065 | |
| 3 | ಫೆಬ್ರವರಿ-2025 | 50 | 1069.77 | 6780.54 | 0 | 7 | 0.1660 | 20 | 0.172 | 22 | 0.466 | 1 | 0.065 | |